ಸಾಕ್ಷಿಯನ್ನು ದಿನಾಂಕಃ 27/07/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ**

ರಿ.ಸ. ನಂ.578/4 ಈ ಆಸ್ತಿಯು ಯಾರು ಯಾರಿಂದ ಯಾವಾಗ ಖರೀದಿ ಹಿಡಿದರು ಎಂದು ನನಗೆ ಗೊತ್ತಿಲ್ಲ, ಆದರೆ ನಮ್ಮ ಅಜ್ಜನ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ನಾನು 01/07/1971 ರಲ್ಲಿ ಹುಟ್ಟಿದ್ದೇನೆ. 1936 ರಲ್ಲಿ ಯಾರ ಆಸ್ತಿ ಯಾರು ಖರೀದಿ ಹಿಡಿದರು ಎಂದು ನನಗೆ ಗೊತ್ತಿಲ್ಲ. ನಿಮ್ಮ 2 ನೇ ಅಜ್ಜ ಬಸಪ್ಪ ಇವರ ಹೆಂಡತಿಯ ತವರುಮನೆಯ ಊರು ಯಾವುದು ಎಂದು ಗೊತ್ತಿಲ್ಲ. ಬಾಳಪ್ಪ ಭರಮಪ್ಪ ಛಬ್ಬೆಬಾವಿ ಇವರು ನನ್ನ ಅಜ್ಜನ ಅಪ್ಪ ಎಂದು ಹೇಳುತ್ತಾರೆ. ಬಾಳಪ್ಪನ ಮಕ್ಕಳಾದ ಬಸಪ್ಪ, ಚನ್ನಬಸಪ್ಪ, ಶಿವಬಸಪ್ಪ ಮತ್ತು ಗಂಗವ್ವ ನಾನು ಹುಟ್ಟಿದ ನಂತರ ಬೇರೆಯಾಗಿದ್ದಾರೆ, ಬೇರೆ ಎಂದರೆ ಅಪ್ಪಾಟ ನಲ್ಲಿ ಬೇರೆಯಾಗಿದ್ದಾರೆ ಎಂದು ಹೇಳುತ್ತಾರೆ. 1977-78 ರಲ್ಲಿ ಬೇರೆಯಾಗಿ ವಾಸಿಸಲು ಪ್ರಾರಂಭಿಸಿದರು ಎಂದರೆ ಸರಿ. ದಾವಾ ಹಾಕುವಾಗ ಡ ನಂಬರ 8309 ನಾನು ತೆಗೆದು ನೋಡಿರುವುದಿಲ್ಲ. ಸದರಿ ಡ ಉತಾರದಲ್ಲಿ ದಿನಾಂಕ 06/07/1977 ರಲ್ಲಿ ನಿಮ್ಮ ಅಜ್ಜನ ಅಪ್ಪ ತೀರಿಕೊಂಡ ನಂತರ ಅವರಿಗೆ ಈಗಾಗಲೇ ನಾಲ್ಕು ಎಕರೆ ಜಮೀನು ಸರ್ವೇ ನಂ.350/2 ಬ ಉಣ್ಣಲು ಕೊಟ್ಟಿದ್ದರು ಅದರಲ್ಲಿ ಅವರ ವಾರಸುದಾರರಿಗೆ ಸಾಮೂಹಿಕವಾಗಿ ಹೆಸರು ದಾಖಲಿಸಲಾಗಿದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಡ ದಲ್ಲಿ ಈಗಾಗಲೇ ಬೇರೆಯಾಗಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಸದರಿ ಕಾಗದ ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. ಈ ದಾವಾ ಹಾಕಲು ಮಾಹಿತಿಯನ್ನು ನನ್ನ ತಂದೆ ಕೊಟ್ಟಿದ್ದರು ಮತ್ತು ಅವರೆ ಈದಾವೆಯನ್ನು ಹಾಕಿದ್ದು. ನನ್ನ ತಂದೆ ವಾದ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಓದಿ ತಿಳಿದುಕೊಂಡಿದ್ದೇನೆ ಅದರಲ್ಲಿ ಮೇಲೆ ಹೇಳಿದ ಡ ಉತಾರದ ಬಗ್ಗೆ ಬರೆದಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಡ ಉತಾರ 8535 ನಾನು ನೋಡಿರುವುದಿಲ್ಲ. ಸದರಿ 8535 ಡ ಉತಾರ 25/03/1978

ಈಗಾಗಲೇ ಕುಟುಂಬದಲ್ಲಿ ಪಾಲು ವಾಟ್ನಿ ಆಗಿದ್ದು ಆರ್ ಎಸ್ ನಂ.357/2ಬ ಈ ಆಸ್ತಿಯನ್ನು ಸಾಮೂಹಿಕವಾಗಿ ಬಸಪ್ಪ ಮತ್ತು ಚನ್ನಬಸಪ್ಪ ಇವರಿಗೆ ಕೊಟ್ಟಿದ್ದಾರೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡ ದಲ್ಲಿ ಮುಂಡರಗಿ ತಾಲೂಕ ಶಿರೂರು ಗ್ರಾಮದ ಆಸ್ತಿ ಬಂದಿರುತ್ತದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಅವರವರು ಆಪ್ಸಾತ್ ನಲ್ಲಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಮುಂಡರಗಿಯ ಶಿರೂರು ಗ್ರಾಮದ ನಿಮ್ಮ ಪಾಲಿಗೆ ಬಂದ ಆಸ್ತಿಯನ್ನು ಹುಚ್ಚಪ್ಪ ರಾಮಪ್ಪ ಮುರಡಿ ಇವರಿಗೆ ನಿಮ್ಮ ಅಪ್ಪ ಮತ್ತು ನಿಮ್ಮ ಕಾಕಾ ಬಸಪ್ಪ ಮಾರಿಕೊಂಡಿದ್ದೀರಿ ಎಂದರೆ ಸಾಕ್ಷಿ ಉಣ್ಣಲು ಕೊಟ್ಟಿದ್ದರು ಅದಕ್ಕೆ ಮಾರಾಟ ಮಾಡಿದ್ದೇವೆ ಎಂದು ಹೇಳುತ್ತಾರೆ. ಮಾರಾಟ ಮಾಡಿದ್ದು ತಪ್ಪು ಇದೆ ಎಂದು ದಾವಾ ಮಾಡಿದ್ದೀರಿ ಎಂದರೆ ಸರಿ. ಸದರಿ ದಾವೆ ಕೆಳಗಿನ ನ್ಯಾಯಾಲಯದಲ್ಲಿ ವಜಾ ಆಗಿದೆ ಎಂದರೆ ಸರಿ. ಸದರಿ ದಾವೆ ವಜಾ ಆದ ಮೇಲೆ ಅಪಿಲು ಮಾಡಿದ್ದೀರಿ, ಮೇಲ್ಮನವಿ ನ್ಯಾಯಾಲಯವು ಸದರಿ ದಾವೆಯನ್ನು ರಿಮಾಂಡ್ ಮಾಡಿದರು ಎಂದರೆ ಸರಿ.

**ಮುಂದಿನ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು ಆಲಿಸಿ ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
27.07.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**